# ಸಂಪಾದಕೀಯ

## ತ್ಯಾಗವೇ ಜೀವನ

### ತ್ಯಾಗ ಮತ್ತು ಸ್ಪರ್ಧೆ

'ಸಮಾಜ ನಿರ್ಮಾಣ, ವೈವಾಹಿಕ ಪದ್ಧತಿ, ಮಕ್ಕಳ ಮೇಲಿನ ಪ್ರೀತಿ, ನಮ್ಮ ಸತ್ಕಾರ್ಯಗಳು, ನೈತಿಕತೆ ಇವೆಲ್ಲವೂ ತ್ಯಾಗದ ವಿವಿಧ ರೂಪಗಳು. ಪ್ರತಿಯೊಂದು ಸಮಾಜದಲ್ಲಿಯೂ ನಮ್ಮೆಲ್ಲರ ಜೀವನವೂ ಇಚ್ಛೆಯ ನಿಯಂತ್ರಣವನ್ನು, ಆಸೆಯ ನಿಯಂತ್ರಣವನ್ನು ಅವಲಂಬಿಸಿದೆ' (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೪.೪೬೩) ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ವಿಕಾಸವಾದಿಗಳು ಸ್ಪರ್ಧೆಯೇ ವಿಕಾಸದ ಹಿಂದಿರುವ ಮುಖ್ಯ ತತ್ತ್ವ ಎನ್ನುತ್ತಾರೆ. ಇದಕ್ಕೆ ವಿರುದ್ಧವಾಗಿ ಸ್ವಾಮಿ ವಿವೇಕಾನಂದರು ಪ್ರೀತಿ, ಪರಸ್ಪರ ಸಹಕಾರ ಇವುಗಳೇ ಪ್ರಗತಿಯ ಹಿನ್ನೆಲೆ ಎಂದು ಹೇಳುತ್ತಾರೆ. ಸ್ಪರ್ಧೆಯು ವಿನಾಶಕ್ಕೆ ಹಾದಿ, ಪರಸ್ಪರ ಸಹಕಾರ ಮುನ್ನಡೆಗೆ ದಾರಿ. ಅವರಿದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ. ಒಂದು ಥಿಯೇಟರಿನಲ್ಲಿ ನಾಟಕ ನಡೆಯುತ್ತಿದೆ. ಸಹಸ್ರಾರು ಪ್ರೇಕ್ಷಕರು ನೆರೆದಿದ್ದಾರೆ. ಎಲ್ಲರೂ ತದೇಕಚಿತ್ತರಾಗಿ ನಾಟಕವನ್ನು ವೀಕ್ಷಿಸುತ್ತಿದ್ದಾರೆ. ಆಗ ಇದ್ದಕ್ಕಿದ್ದಂತೆ ಥಿಯೇಟರಿಗೆ ಬೆಂಕಿ ಬೀಳುತ್ತದೆ. ಎಲ್ಲರೂ ಭಯೋದ್ವೇಗದಿಂದ, ಪ್ರಾಣದ ಆಸೆಯಿಂದ ನಾಮುಂದು ತಾಮುಂದು ಎಂದು ಹೊರಗೆ ಹೋಗಲು ಬಾಗಿಲೆಡೆಗೆ ನುಗ್ಗುತ್ತಾರೆ. ಇಕ್ಕಟ್ಟಿನಿಂದಾಗಿ ಹೊರಗೆ ಹೋಗುವುದೇ ಕಷ್ಟವಾಗುತ್ತದೆ. ಅನೇಕರು ಕಾಲ್ತುಳಿತಕ್ಕೆ ಸಿಕ್ಕಿ ಸಾಯುತ್ತಾರೆ, ಮತ್ತನೇಕರು ಬೆಂಕಿಗೆ ಆಹುತಿಯಾಗುತ್ತಾರೆ. ಇದು ಸ್ಪರ್ಧೆಯ ಪರಿಣಾಮ. ಇದಲ್ಲದೆ, 'ನಾವೆಲ್ಲರೂ ಬೆಂಕಿಯಿಂದ ತಪ್ಪಿಸಿಕೊಳ್ಳೋಣ' ಎಂದು ನಿಧಾನವಾಗಿ ಪರಸ್ಪರ ಸಹಕಾರದಿಂದ ಒಬ್ಬೊಬ್ಬರಾಗಿ ಹೊರಗೆ ಬಂದಿದ್ದರೆ ಬಹುಶಃ ಎಲ್ಲರೂ ಮೃತ್ಯುವಿನಿಂದ ಪಾರಾಗುತ್ತಿದ್ದರು. ಆದ್ದರಿಂದ ನಿಜವಾಗಿಯೂ ಜೀವನ ನಿಂತಿರುವುದು ತ್ಯಾಗದ ಆಧಾರದ ಮೇಲೆ. **'ಎಲ್ಲ ನಾಗರಿಕತೆಯ ತಳಹದಿಯೇ ಆತ್ಮಾರ್ಪಣೆ,'** ಎನ್ನುತ್ತಾರೆ ಸ್ವಾಮೀಜಿ. ಇದುವರೆಗೂ ಮಾನವ ಸಮಾಜ ಉಳಿದಿದ್ದರೆ, ಪ್ರಗತಿಯನ್ನು ಸಾಧಿಸುತ್ತಿದ್ದರೆ ಅದು ತ್ಯಾಗದ ಮೂಲಕವೇ ಹೊರತು ಸ್ಪರ್ಧೆಯ ಮೂಲಕವಲ್ಲ.

> **ಸ್ಪರ್ಧೆಯು ವಿನಾಶಕ್ಕೆ ಹಾದಿ, ಪರಸ್ಪರ ಸಹಕಾರ ಮುನ್ನಡೆಗೆ ದಾರಿ.**

### ಪರಸ್ಪರಾವಲಂಬನೆ

ಇಂದಿನ ಸಮಾಜವನ್ನು ನಾವು ಸ್ಪರ್ಧಾತ್ಮಕ ಸಮಾಜ ಎಂದು ಕರೆಯುತ್ತೇವೆ. ಯಾರು ಈ ಸ್ಪರ್ಧೆಯ ಸವಾಲನ್ನು ಎದುರಿಸಲಾರರೊ ಅವರು ಹಿಂದೆ ಬೀಳುತ್ತಾರೆ, ಅತ್ಯಂತ ತ್ವರಿತ ಗತಿಯಲ್ಲಿ ಮುನ್ನುಗ್ಗುತ್ತಿರುವ ಈ ಸಮಾಜವೆಂಬ ದೈತ್ಯ ರಥಚಕ್ರದಡಿ ಸಿಕ್ಕಿ ನುಚ್ಚು ನೂರಾಗುತ್ತಾರೆ. ಇದೊಂದು ಸಾಮಾನ್ಯ ದೃಷ್ಟಿ. ಆದರೆ ಸಮಾಜ ನಿಂತಿರುವುದು ಪರಸ್ಪರ ಆಲಂಬನೆಯನ್ನು ಆಧರಿಸಿ. ಹಿಂದೆಂದಿಗಿಂತಲೂ ಅಧಿಕವಾಗಿ ಇಂದು ಸಮಾಜದಲ್ಲಿ ಪರಸ್ಪರ ಆಲಂಬನೆಯನ್ನು ಕಾಣುತ್ತೇವೆ. ಸ್ಪರ್ಧೆಯ ಹಿಂದೆಯೂ ನಾವು ಪರಸ್ಪರಾವಲಂಬನೆಯನ್ನೇ ಕಾಣಬಹುದು. ಒಂದು ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿಯ ತ್ವರಿತ ಮುನ್ನಡೆ ಇನ್ನೊಬ್ಬ ವ್ಯಕ್ತಿಯ ಮುನ್ನಡೆಗೆ ಸ್ಫೂರ್ತಿಯನ್ನು ನೀಡುತ್ತದೆ. ಅವನ ಮುನ್ನಡೆ ಮೊದಲನೆಯವನಿಗೆ ಸ್ಫೂರ್ತಿಯನ್ನು ನೀಡುತ್ತದೆ. ಇಲ್ಲಿ ಪರಸ್ಪರ ಆಲಂಬನೆಯಿದೆ, ಒಬ್ಬರು ಮತ್ತೊಬ್ಬರಿಗೆ ಕೃತಜ್ಞರಾಗಿರಬೇಕು. ಇದು ಆರೋಗ್ಯಕರವಾದ ಸ್ಪರ್ಧೆ. ಒಂದು ತರಗತಿಯಲ್ಲಿ ಇಬ್ಬರು ಉತ್ತಮ ಅಂಕವನ್ನು ಪಡೆಯುವ ವಿದ್ಯಾರ್ಥಿಗಳಿದ್ದರೆ ಅವರಿಬ್ಬರ ನಡುವೆ ಉಂಟಾಗುವ ಸ್ಪರ್ಧೆ ಇಬ್ಬರಿಗೂ ಅಧಿಕವಾಗಿ ಓದಲು ಸಹಾಯಕವಾಗುತ್ತದೆ. ಪ್ರತಿಸ್ಪರ್ಧಿ ಇಲ್ಲದೆ ಒಬ್ಬನೇ ಇದ್ದರೆ ಓದುವುದರಲ್ಲಿ ಅವನು ಹೆಚ್ಚು ಪ್ರಗತಿಯನ್ನು ಸಾಧಿಸದೆ ಇರಬಹುದು. ಪ್ರತಿಸ್ಪರ್ಧಿಯಿಂದ ಅವನಿಗೆ ಸಹಾಯವೇ ಆದಂತಾಯಿತು. ದ್ವೇಷ ಅಸೂಯೆಯ ಮನೋಭಾವಕ್ಕೆ ಎಡೆಗೊಡದ, ಇತರರನ್ನು ಹಿಂದಕ್ಕೆ ತಳ್ಳಿ ಮುನ್ನುಗ್ಗುವ ಮನೋಭಾವದಿಂದ ಮುಕ್ತವಾದ ಸ್ಪರ್ಧೆ ಪ್ರಗತಿಗೆ ಸಾಧಕವಾಗುತ್ತದೆ. ಇಲ್ಲಿ ಪ್ರತಿಸ್ಪರ್ಧಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವಲ್ಲಿ ಅಹಂಕಾರ ತ್ಯಾಗವನ್ನು ಕಾಣುತ್ತೇವೆ. ಆದ್ದರಿಂದ ಸ್ಪರ್ಧೆಗೂ ತ್ಯಾಗವೇ ಆಧಾರವಾದಂತಾಯಿತು.

### ತ್ಯಾಗವೇ ಸಮಾಜದ ತಳಹದಿ

ನಾವೆಲ್ಲರೂ ಸಮಾಜವೆಂಬ ದೋಣಿಯಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದೇವೆ. ನಮ್ಮ ಮುನ್ನಡೆ ದೋಣಿಯ ವೇಗವನ್ನು ಅವಲಂಬಿಸಿದೆ. ನಾವು ದೋಣಿಯ ವೇಗವನ್ನು ಹೆಚ್ಚಿಸಬಹುದೇ ಹೊರತು, ಯಾರೊಬ್ಬ ಪ್ರಯಾಣಿಕನೂ ತಾನು ಮೊದಲು ದಡವನ್ನು ಸೇರುತ್ತೇನೆ ಎಂದು ಮುನ್ನುಗ್ಗಲಾಗುವುದಿಲ್ಲ. ಅಲ್ಲಿ ಅವನು ತನ್ನತನವನ್ನು ತ್ಯಾಗಮಾಡಿ ಇತರ ಪ್ರಯಾಣಿಕರೊಡನೆ ಸಹಕರಿಸಬೇಕಾಗುತ್ತದೆ. ಅವನು ಇತರರನ್ನು ಮೀರಿ ಮುಂದೆ ಹೋದರೆ ನಿಸ್ಸಹಾಯಕನಾಗುತ್ತಾನೆ. ಆದ್ದರಿಂದ ತ್ಯಾಗವೇ ಸಮಾಜದ ಆಧಾರ ಸ್ತಂಭ. ಒಂದು ಸಮಾಜವನ್ನು ಕಟ್ಟುವುದೆಂದರೆ ವ್ಯಕ್ತಿಗಳ ಸ್ವಾರ್ಥತ್ಯಾಗ. ಒಂದು ಸಂಸ್ಥೆಯನ್ನು ಸ್ಥಾಪಿಸಬೇಕಾದರೆ ಅನೇಕ ವ್ಯಕ್ತಿಗಳು ತಮ್ಮ ಶ್ರಮವನ್ನಾಗಲಿ, ಸಮಯವನ್ನಾಗಲಿ, ಧನವನ್ನಾಗಲಿ ಅಥವಾ ಜ್ಞಾನವನ್ನಾಗಲಿ ಸಮರ್ಪಿಸಬೇಕಾಗುತ್ತದೆ. ಹಾಗೆಯೇ ಆ ಸಂಸ್ಥೆ

ಮುಂದುವರಿಯಬೇಕಾದರೆ ವ್ಯಕ್ತಿಗಳು ತಮ್ಮ ಸ್ವಂತ ಇಚ್ಛೆಯನ್ನು ತ್ಯಾಗಮಾಡಬೇಕಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಸ್ವಂತ ಇಚ್ಛೆಯಂತೆಯೇ ಎಲ್ಲವೂ ನಡೆಯಬೇಕೆಂದು ಒತ್ತಾಯಿಸಿದರೆ ಯಾವ ಸಂಸ್ಥೆಯೂ ಸರಿಯಾಗಿ ನಡೆಯುವುದಿಲ್ಲ—ಕ್ರಮೇಣ ಅದು ಕುಸಿದು ಬೀಳುತ್ತದೆ. ಇದು ಕುಟುಂಬ ವ್ಯವಸ್ಥೆಗೂ ಹಾಗೂ ಒಟ್ಟು ಸಮಾಜಕ್ಕೂ ಅನ್ವಯಿಸುತ್ತದೆ. ಪ್ರತಿಯೊಂದು ಕುಟುಂಬವೂ ಯಾವುದೋ ಒಬ್ಬ ವ್ಯಕ್ತಿಯ ಅಥವಾ ಕೆಲವು ವ್ಯಕ್ತಿಗಳ ತ್ಯಾಗವನ್ನು ಅವಲಂಬಿಸಿರುತ್ತದೆ. ಹಾಗೆಯೇ ಇಡೀ ಸಮಾಜ ನಿಂತಿರುವುದೂ ಕೂಡ.

## ತನ್ನಲ್ಲಿ ನೆಲೆ ನಿಲ್ಲುವುದು

ತ್ಯಾಗವೆಂದಾಕ್ಷಣ ಅನೇಕರಿಗೆ ಭಯವುಂಟಾಗುತ್ತದೆ. ತ್ಯಾಗವೆಂದರೆ ಮನೆ ಮಠ ಎಲ್ಲ ಬಿಟ್ಟು ಸಂನ್ಯಾಸ ಸ್ವೀಕರಿಸುವುದು, ಅಥವಾ ಕಾಡಿಗೋ ಪರ್ವತಪ್ರದೇಶಕ್ಕೋ ಹೋಗಿ ತಪಸ್ಸನ್ನಾಚರಿಸುವುದು ಎಂಬ ಕಲ್ಪನೆ ಅನೇಕರಲ್ಲಿ ಉದಿಸುತ್ತದೆ. ಇದು ತ್ಯಾಗದ ಒಂದು ಅಂಶವಾಗಬಹುದೇ ಹೊರತು ಇದೇ ನಿಜವಾದ ಅರ್ಥದಲ್ಲಿ ತ್ಯಾಗವಲ್ಲ. ತ್ಯಾಗವೆಂದರೆ ತನ್ನಲ್ಲಿ ತಾನು ನೆಲೆ ನಿಲ್ಲುವುದು. ನಾವು ಸಾಮಾನ್ಯವಾಗಿ ಹೊರಗೆಲ್ಲೋ ಇರುತ್ತೇವೆ. ವ್ಯಕ್ತಿಯೊಡನೆಯೋ, ವಸ್ತುವಿನೊಡನೆಯೋ, ಅಧಿಕಾರ ಸ್ಥಾನಮಾನಾದಿಗಳೊಡನೆಯೊ ನಮ್ಮನ್ನು ನಾವು ಒಂದಾಗಿಸಿಕೊಳ್ಳುತ್ತೇವೆ. ನಮ್ಮ ನೆಲೆ ನಮ್ಮಲ್ಲಿರದೆ ಹೊರಗೆಲ್ಲೊ ಇರುತ್ತದೆ. ನಮ್ಮ ವ್ಯಕ್ತಿತ್ವದ ಕೇಂದ್ರ ನಮ್ಮಲ್ಲಿರದೆ, ನಮ್ಮ ಗುರುತ್ವಕೇಂದ್ರ ನಮ್ಮಲ್ಲಿರದೆ ಬೇರೆಲ್ಲೊ ಇರುತ್ತದೆ.

**ನಮ್ಮ ವ್ಯಕ್ತಿತ್ವದ ಕೇಂದ್ರ ನಮ್ಮಲ್ಲಿಯೇ ಇರಬೇಕು, ನಮ್ಮಲ್ಲಿ ನಾವು ನೆಲೆ ನಿಲ್ಲಬೇಕು. ಆಗ ಹೊರಗಿನ ಸನ್ನಿವೇಶಗಳಾವುವೂ ನಮ್ಮನ್ನು ಅಸ್ಥಿರಗೊಳಿಸಲಾರವು. ನಾವು ಆಗ 'ಸ್ವಸ್ಥ' ರಾಗಿರುತ್ತೇವೆ.**

ಇದರಿಂದಾಗಿ ಹೊರಗಿನ ಸನ್ನಿವೇಶದಲ್ಲಿ ಏನೇ ವ್ಯತ್ಯಯವಾದರೂ ನಾವು ವಿಚಲಿತರಾಗುತ್ತೇವೆ. ನಮ್ಮ ಅಧಿಕಾರ ಹೋದರೆ ನಮ್ಮ ವ್ಯಕ್ತಿತ್ವವೇ ಹೋದಂತಾಗುತ್ತದೆ. ಕೂಡಿಟ್ಟ ಹಣ ನಷ್ಟವಾದರೆ ನಮ್ಮ ಸರ್ವಸ್ವವೇ ನಾಶವಾದಂತಾಗುತ್ತದೆ. ಪಂಚಶಿಖಾಚಾರ್ಯರು ಹೇಳುತ್ತಾರೆ: **ವ್ಯಕ್ತಮವ್ಯಕ್ತಂ ವಾ ಸತ್ತ್ವಂ ಆತ್ಮತ್ವೇನಾಭಿಪ್ರತೀತ್ಯ ತಸ್ಯ ಸಂಪದಂ ಅನುನಂದತ್ಯಾತ್ಮಸಂಪದಂ ಮನ್ವಾನಸ್ತಸ್ಯ ವ್ಯಾಪದಂ ಅನುಶೋಚತ್ಯಾತ್ಮಸಂಪದಂ ಮನ್ವಾನಃ ಸ ಸರ್ವೋ ಅಪ್ರತಿಬುದ್ಧಃ ||** (ಯೋಗಸೂತ್ರ, ವ್ಯಾಸ ಭಾಷ್ಯ, ೨.೫)—'ಚೇತನವಾದ ಮತ್ತು ಅಚೇತನವಾದ ವಸ್ತುಗಳನ್ನು ತನ್ನ ಆತ್ಮನೆಂದು ಅರಿತು ಅವುಗಳ ಸಂಪತ್ತನ್ನು ತನ್ನ ಸಂಪತ್ತೇ ಎಂದು ಅರಿತು, ಅವುಗಳಿಗೆ ವಿಪತ್ತುಂಟಾದಾಗ ತನಗೇ ವಿಪತ್ತುಂಟಾಗಿದೆ ಎಂದು ಭಾವಿಸುವ ಮನುಷ್ಯರೆಲ್ಲರೂ ಅಜ್ಞಾನಿಗಳು.'

ಹೀಗೆ ನಮ್ಮ ವ್ಯಕ್ತಿತ್ವದಲ್ಲಿ ಅಸ್ಥಿರತೆ ಉಂಟಾಗುತ್ತದೆ. ಯಾವುದೊ ಪಕ್ಷಿಯಲ್ಲಿ ತನ್ನ ಪ್ರಾಣವನ್ನಿಟ್ಟಿರುವ ರಾಕ್ಷಸನ ಸ್ಥಿತಿಯಾಗುತ್ತದೆ ನಮ್ಮದು. ಆ ಪಕ್ಷಿಯನ್ನು ಸಾಯಿಸಿದಕೂಡಲೆ ರಾಕ್ಷಸನು ಸತ್ತು ಬೀಳುತ್ತಾನೆ. ನಮ್ಮ ವ್ಯಕ್ತಿತ್ವದ ಕೇಂದ್ರ ನಮ್ಮಲ್ಲಿಯೇ ಇರಬೇಕು, ನಮ್ಮಲ್ಲಿ ನಾವು ನೆಲೆ ನಿಲ್ಲಬೇಕು. ಆಗ ಹೊರಗಿನ ಸನ್ನಿವೇಶಗಳಾವುವೂ ನಮ್ಮನ್ನು ಅಸ್ಥಿರಗೊಳಿಸಲಾರವು. ನಾವು ಆಗ 'ಸ್ವಸ್ಥ' ರಾಗಿರುತ್ತೇವೆ. ಹೊರಗಿನ ತಾದಾತ್ಮ್ಯಗಳಿಂದ ನಮ್ಮನ್ನು ಹಿಂತೆಗೆದುಕೊಂಡು ನಮ್ಮಲ್ಲಿ ನಾವೇ ಇರಬೇಕು. ಆಗ ಹೊರಗಿನ ವಸ್ತುಗಳಲ್ಲಿ ಅನಾಸಕ್ತಿ ಉಂಟಾಗುತ್ತದೆ. ಈ ಅನಾಸಕ್ತಿಯೇ ನಿಜವಾದ ತ್ಯಾಗ.

**ಅನಾಸಕ್ತಿಯೇ ನಿಜವಾದ ತ್ಯಾಗ. ಈ ಅನಾಸಕ್ತಿಯಿಂದ ವ್ಯಕ್ತಿಯು ಮಾನಸಿಕ ಪರಾವಲಂಬನೆಯಿಂದ ಮುಕ್ತನಾಗಿ ಸ್ವಾವಲಂಬಿಯಾಗುತ್ತಾನೆ. ಇತರರ ಪ್ರೀತಿ, ಸಹಾನುಭೂತಿ, ಪ್ರಶಂಸೆ ಇತ್ಯಾದಿಗಳಿಗಾಗಿ ಹಾತೊರೆಯದೆ ಅವನು ತಾನೇ ತಾನಾಗಿರುತ್ತಾನೆ.**

ಈ ಅನಾಸಕ್ತಿಯಿಂದ ವ್ಯಕ್ತಿಯು ಮಾನಸಿಕ ಪರಾವಲಂಬನೆಯಿಂದ ಮುಕ್ತನಾಗಿ ಸ್ವಾವಲಂಬಿಯಾಗುತ್ತಾನೆ. ಇತರರ ಪ್ರೀತಿ, ಸಹಾನುಭೂತಿ, ಪ್ರಶಂಸೆ ಇತ್ಯಾದಿಗಳಿಗಾಗಿ ಹಾತೊರೆಯದೆ ಅವನು ತಾನೇ ತಾನಾಗಿರುತ್ತಾನೆ. ಈ ತನ್ನತನದಲ್ಲಿ ದೊರೆಯುವ ಸುಖ ಮತ್ತಾವುದರಿಂದಲೂ ದೊರೆಯದು. ಒಂದು ಸಂಸ್ಕೃತ ಹೇಳಿಕೆಯಿದೆ: **ಸರ್ವಂ ಪರವಶಂ ದುಃಖಂ ಸರ್ವಂ ಆತ್ಮವಶಂ ಸುಖಮ್**|—'ಇತರರಿಗೆ, ಇತರ ವಸ್ತುಗಳಿಗೆ, ಸನ್ನಿವೇಶಗಳಿಗೆ ವಶರಾಗಿರುವುದೆಲ್ಲ ದುಃಖ ಮತ್ತು ಎಲ್ಲರೀತಿಯಲ್ಲಿಯೂ ತನ್ನ ವಶನಾಗಿರುವುದು ಸುಖ.'

## ನಮ್ಮ ಅಭಿಪ್ರಾಯ ತ್ಯಾಗ

ನಾವು ಹೊರಗಿನ ವಿಷಯಗಳಿಗೆ ವಶರಾಗಿರುವುದು ಮಾತ್ರವಲ್ಲದೆ ನಮ್ಮೊಳಗಿನ ನಮ್ಮದೇ ಅಭಿಪ್ರಾಯಗಳಿಗೆ, ಅಭಿಮತಗಳಿಗೆ, ನಮ್ಮದೇ ಪ್ರಿಯ ಭಾವನೆಗಳಿಗೆ (*pet ideas*) ನಾವು ವಶರಾಗಿರುತ್ತೇವೆ. ಅವನ್ನು ಯಾವುದೇ ರೀತಿಯಲ್ಲಿಯೂ, ಅವು ಸತ್ಯಕ್ಕೆ ವಿರುದ್ಧವಾಗಿ ಕಂಡುಬಂದರೂ, ಬಿಟ್ಟುಕೊಡಲು ನಾವು ಸಿದ್ಧರಿರುವುದಿಲ್ಲ. ಒಬ್ಬ ವ್ಯಕ್ತಿಯ ಬಗ್ಗೆ ನಮಗೆ ಒಂದು ಅಭಿಪ್ರಾಯವಿದ್ದರೆ, ಅದಕ್ಕೆ ವಿರುದ್ಧವಾದ ತಥ್ಯಾಂಶಗಳು ನಮಗೆ ತಿಳಿದಿದ್ದರೂ ಕೂಡ, ಆ ಅಭಿಪ್ರಾಯವನ್ನು ಬದಲಾಯಿಸಲು ನಾವು ಸಿದ್ಧರಿರುವುದಿಲ್ಲ. ಹಾಗೆಯೇ ಸಮಾಜದ ಬಗ್ಗೆ, ರಾಜಕೀಯದ ಬಗ್ಗೆ, ಧರ್ಮದ ಬಗ್ಗೆ, ಆತ್ಯಂತಿಕ ಸತ್ಯದ ಬಗ್ಗೆ ನಮ್ಮದೇ ಅಭಿಮತಗಳನ್ನು ಹೊಂದಿರುತ್ತೇವೆ, ಮತ್ತು ಅವುಗಳಿಗೆ ಬಲವಾಗಿ ಅಂಟಿಕೊಂಡಿರುತ್ತೇವೆ. ಅವು ನಮ್ಮ ವ್ಯಕ್ತಿತ್ವದ ಒಂದು ಅಂಶವೇ ಆಗಿಬಿಟ್ಟಿರುತ್ತವೆ. ಅವನ್ನು ಬಿಟ್ಟುಕೊಡುವುದೆಂದರೆ ನಮ್ಮ ಅಂಗಾಂಗಗಳನ್ನೇ ಕಳಚಿಕೊಟ್ಟಂತಾಗುತ್ತದೆ. ಆಗ ನಮ್ಮ ವ್ಯಕ್ತಿತ್ವ ಶೂನ್ಯವಾದಂತಾಗುತ್ತದೆ. ಕರ್ಣನು ತನ್ನ ಅಮೃತಕಲಶವನ್ನು ದಾನ ಮಾಡಿದಮೇಲೆ ನಿಃಸತ್ವನಾದ, ಆಗಲೇ ಅವನ ನಾಶವಾದಂತಾ

ಯಿತು. ಹೀಗೆಯೇ ಅನೇಕ ಅಭಿಪ್ರಾಯಗಳು, ಪ್ರಿಯ ಭಾವನೆಗಳು ನಮ್ಮ ಅಮೃತಕಲಶವಾಗಿರುತ್ತವೆ. ನಮ್ಮ ಅಹಂಕಾರಕ್ಕೆ ಅವು ಆಶ್ರಯವಾಗಿರುತ್ತವೆ. ಆದ್ದರಿಂದ ನಮ್ಮ ಅಹಂಕಾರ ಅವನ್ನು ಬಿಟ್ಟುಕೊಡಲು ಇಷ್ಟಪಡುವುದಿಲ್ಲ. ತಿಕ್ ನ್ಯಾಟ್ ಹನ್ಸ್ ಹೇಳುತ್ತಾರೆ: 'ಸತ್ಯದ ಬಗೆಗಿನ ನಮ್ಮ ಅಭಿಪ್ರಾಯವನ್ನು ಬಿಟ್ಟುಕೊಡಲು ನಾವು ಸಿದ್ಧರಾದರೆ ಸತ್ಯವು ತಾನಾಗಿಯೇ ಪ್ರಕಾಶಗೊಳ್ಳುತ್ತದೆ.' ಈ ರೀತಿ ನಮ್ಮ ಅಭಿಪ್ರಾಯವನ್ನು ಬಿಟ್ಟುಕೊಡುವುದೂ ಒಂದು ಮುಖ್ಯವಾದ ತ್ಯಾಗ.

### ಮತೀಯತೆಯ ತ್ಯಾಗ

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಕೆಲವರು ವೃತ್ತಪತ್ರಿಕೆಯಲ್ಲಿ ಬಂದಿದ್ದನ್ನು ಮಾತ್ರ ನಂಬುತ್ತಾರೆ, ಎಂದು. ಒಬ್ಬ ವ್ಯಕ್ತಿಯು ತನ್ನ ಸ್ನೇಹಿತನಿಗೆ, ಈಗ ತಾನೆ ಒಂದು ಮನೆಗೆ ಬೆಂಕಿ ಬಿದ್ದಿದ್ದನ್ನು ನೋಡಿಕೊಂಡು ಬಂದೆನು, ಎನ್ನುತ್ತಾನೆ. ಆಗ ಸ್ನೇಹಿತನು, 'ತಾಳು, ವೃತ್ತಪತ್ರಿಕೆಯಲ್ಲಿ ಆ ಸುದ್ದಿ ಇದೆಯೆ ಎಂಬುದನ್ನು ನೋಡುತ್ತೇನೆ' ಎಂದು ವೃತ್ತಪತ್ರಿಕೆಯನ್ನು ತೆರೆದನು. ಅದರಲ್ಲಿ ಆ ಸುದ್ದಿ ಇರಲಿಲ್ಲ. 'ನಾನು ನಿನ್ನ ಮಾತನ್ನು ನಂಬುವುದಿಲ್ಲ' ಎಂದು ಬಿಟ್ಟನು. ವೃತ್ತಪತ್ರಿಕೆಯ ಮೇಲಿರುವ ಅವನ ಶ್ರದ್ಧೆ ನಿಜವಾದ ಸತ್ಯವನ್ನು ಕಡೆಗಣಿಸುವಂತೆ ಮಾಡಿತು. ಸತ್ಯವನ್ನಾದರೂ ನಾವು ತೊರೆದೇವು, ಆದರೆ ನಮ್ಮ ಅಂಧಶ್ರದ್ಧೆಯನ್ನು ನಾವು ತೊರೆಯುವುದಿಲ್ಲ. ಇದರ ಪರಿಣಾಮವಾಗಿ ನಾವು ಎಷ್ಟೋ ಮೂಢನಂಬಿಕೆಗಳನ್ನು ಕಾಪಾಡಿಕೊಂಡು ಬರುತ್ತೇವೆ. ಹೀಗೆಯೇ ನಮ್ಮ ಮತಾಂಧತೆಗಳನ್ನೂ ನಾವು ತ್ಯಜಿಸಲು ಇಷ್ಟಪಡುವುದಿಲ್ಲ. ಅವು ನಮ್ಮ ಜೀವನದೊಡನೆ ಅತ್ಯಂತ ಹಾಸುಹೊಕ್ಕಾಗಿರುತ್ತವೆ. ಅವನ್ನು ಬಿಟ್ಟುಕೊಡುವುದೆಂದರೆ ನಮ್ಮ ವ್ಯಕ್ತಿತ್ವವನ್ನೇ ಬಿಟ್ಟುಕೊಟ್ಟಂತಾಗುತ್ತದೆ. ಮತವೇ ನಮ್ಮ ಪಾಲಿಗೆ ದೇವರ ಸ್ಥಾನವನ್ನು ಪಡೆದಿರುತ್ತದೆ. ದೇವರೆ ಬಂದು ನಾನು ಆ ಮತದಲ್ಲಿಲ್ಲ ಎಂದು ಹೇಳಿದರೂ ಅವನ ಮಾತನ್ನು ನಂಬದೆ ಆ ಮತಕ್ಕೇ ಅಂಟಿಕೊಂಡಿರುತ್ತೇವೆ. ಈ ಮತೀಯತೆ, ಜಾತೀಯತೆ ಮುಂತಾದುವುಗಳ ತ್ಯಾಗವೂ ಆಧ್ಯಾತ್ಮಿಕ ಪ್ರಗತಿಗೆ ಅತ್ಯಂತ ಮುಖ್ಯವಾದುದು.

**ಮತವೇ ನಮ್ಮ ಪಾಲಿಗೆ ದೇವರ ಸ್ಥಾನವನ್ನು ಪಡೆದಿರುತ್ತದೆ. ದೇವರೆ ಬಂದು ನಾನು ಆ ಮತದಲ್ಲಿಲ್ಲ ಎಂದು ಹೇಳಿದರೂ ಅವನ ಮಾತನ್ನು ನಂಬದೆ ಆ ಮತಕ್ಕೇ ಅಂಟಿಕೊಂಡಿರುತ್ತೇವೆ.**

### ಹಳೆಯ ಸಾಧನ ವಿಧಾನಗಳ ತ್ಯಾಗ

ಆಧ್ಯಾತ್ಮಿಕ ಜೀವನದಲ್ಲಿ ನಾವು ಹಂತಹಂತವಾಗಿ ಮುಂದುವರಿಯುತ್ತೇವೆ. ಕೆಲವೊಮ್ಮೆ ಕೆಳಗಿನ ಹಂತಕ್ಕೇ ಅಂಟಿಕೊಂಡು ಮುಂದಿನ ಪ್ರಗತಿಯಿಂದ ವಂಚಿತರಾಗುತ್ತೇವೆ. ಯಾವುದಾದರೊಂದು ಸಾಧನ ವಿಧಾನದಿಂದ ನಾವು ಎಷ್ಟೇ ಪ್ರಯೋಜನವನ್ನು ಪಡೆದಿದ್ದರೂ ಅದೇ ವಿಧಾನಕ್ಕೆ ನಾವು ಗಟ್ಟಿಯಾಗಿ ಅಂಟಿಕೊಂಡುಬಿಟ್ಟರೆ ಅದು ಮುಂದಿನ ಸಾಧನೆಗೆ ಬಾಧಕವಾಗುತ್ತದೆ. ಬಾಹ್ಯ ಪೂಜೆ, ನೈಜ ಭಾವದಿಂದ ಆಚರಿಸಿದರೆ, ಪ್ರಾರಂಭಾವಸ್ಥೆಯಲ್ಲಿ ಆಧ್ಯಾತ್ಮಿಕ ಜೀವನದಲ್ಲಿ ಬಹಳ ಸಹಾಯಕವಾಗುತ್ತದೆ. ಆದರೆ ಮನಸ್ಸು ಸಾಕಷ್ಟು ಪರಿಪಕ್ವವಾದಮೇಲೆ ಜಪ ಧ್ಯಾನಾದಿ ಮುಂದಿನ ಹಂತಕ್ಕೆ ಹೋಗಬೇಕು. ಕೆಲವರು ಪೂಜೆ ಮುಂತಾದ ಕ್ರಿಯಾವಿಧಿಗಳಿಗೇ ಅಂಟಿಕೊಂಡು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವುದೇ ಇಲ್ಲ. ಇಲ್ಲಿಯೂ ಹಿಂದಿನ ಹಂತವನ್ನು ತ್ಯಾಗ ಮಾಡುವ ಧೈರ್ಯ ನಮಗಿರಬೇಕಾಗುತ್ತದೆ. ಬುದ್ಧನು ಹೇಳಿದ ಕಥೆಯೊಂದಿದೆ: ಕೆಲವರು ಬೀದಿಯಲ್ಲಿ ದೋಣಿಯನ್ನು ಹೊತ್ತುಕೊಂಡು ಹೋಗುತ್ತಿದ್ದರು. ನೀರಿನ ಮೇಲಿರಬೇಕಾದ ದೋಣಿಯನ್ನು ಹೀಗೇಕೆ ಹೊತ್ತುಕೊಂಡು ಹೋಗುತ್ತಿದ್ದಾರೆ ಎಂದು ಆಶ್ಚರ್ಯದಿಂದ ಜನರು ಅವರನ್ನು ವಿಚಾರಿಸಿದರು. ಅವರು ಹೇಳಿದರು: ಈ ದೋಣಿಯಿಂದಲೇ ನಾವು ಈಗ ತಾನೇ ನದಿಯನ್ನು ದಾಟಿ ಬಂದಿದ್ದೇವೆ. ಅಷ್ಟೊಂದು ಉಪಕಾರ ಮಾಡಿದ ದೋಣಿಯನ್ನು ಬಿಟ್ಟುಬಿಡುವುದಕ್ಕೆ ಸಾಧ್ಯವೇ? ಆದ್ದರಿಂದ ಅದನ್ನೂ ನಮ್ಮೊಂದಿಗೆ ಹೊತ್ತುಕೊಂಡು ಹೋಗುತ್ತಿದ್ದೇವೆ.' ನಾವೂ ಹೀಗೆಯೇ ಹಳೆಯ ಸಂಪ್ರದಾಯಗಳನ್ನು ಹೊತ್ತುಕೊಂಡು ತಿರುಗುತ್ತೇವೆ.

ಕೆಲವೊಮ್ಮೆ ಸಾಧನೆಯಲ್ಲಿ ಉಂಟಾಗುವ, ಕೆಲವು ಅನುಭವಗಳಿಂದ ಉಂಟಾಗುವ ಆನಂದಕ್ಕೆ ಮನಸೋಲುತ್ತೇವೆ. ಇದನ್ನು **ರಸಾಸ್ವಾದ** ಎಂದು ಕರೆಯುತ್ತಾರೆ. ಈ ರಸಾಸ್ವಾದದ ತ್ಯಾಗವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಲು ಆವಶ್ಯಕವೆಂದು ಹಿಂದಿನ ಆಚಾರ್ಯರು ಹೇಳುತ್ತಾರೆ. ಹೀಗೆ ತ್ಯಾಗದ ಆದರ್ಶ ಮಾನವಜೀವನದ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ.

### ಅಹಂಕಾರ ತ್ಯಾಗ

ಎಲ್ಲಕ್ಕಿಂತ ಮುಖ್ಯವಾಗಿ **ಅಹಂಕಾರದ ತ್ಯಾಗ.** ಎಲ್ಲವನ್ನೂ ತ್ಯಾಗ ಮಾಡಿ ಅದೊಂದನ್ನು ತ್ಯಾಗ ಮಾಡದಿದ್ದರೆ ಬೇರೆಲ್ಲದರ ತ್ಯಾಗದಿಂದ ಯಾವ ಪ್ರಯೋಜನವೂ ಆಗುವುದಿಲ್ಲ. **ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್**—'ಅಹಂಕಾರಯುಕ್ತವಾದ ತ್ಯಾಗ, ರಾಜಸತ್ಯಾಗ. ಇದರಿಂದ ತ್ಯಾಗದ ಫಲ ದೊರೆಯುವುದಿಲ್ಲ'—ಎಂದು ಶ್ರೀಕೃಷ್ಣನು ಹೇಳುತ್ತಾನೆ. 'ಸಾಧು ಅಹಂ' ಅನ್ನು ತ್ಯಾಗಮಾಡುವುದು ಅತ್ಯಂತ ಕಷ್ಟವೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ನಾನು ಮಹಾತ್ಯಾಗಿ, ಸಾಧಕ, ತಪಸ್ವಿ ಎಂಬ ಅಹಂಕಾರವನ್ನು ಬಿಡದಿದ್ದರೆ ಅದು ಆಧ್ಯಾತ್ಮಿಕ ಜೀವನಕ್ಕೆ ದೊಡ್ಡ ಅಡಚಣೆಯಾಗಿ ನಿಲ್ಲುತ್ತದೆ. ಮಹಾಭಾರತದಲ್ಲಿ ಈ ಶ್ಲೋಕ ಬರುತ್ತದೆ:

ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ |
ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜತಿ ತತ್ತ್ಯಜ ||

'ಧರ್ಮ ಅಧರ್ಮಗಳೆರಡನ್ನೂ ತ್ಯಜಿಸು, ಸಾಪೇಕ್ಷವಾದ ಸತ್ಯಾಸತ್ಯಗಳೆರಡನ್ನೂ ತ್ಯಜಿಸು. ಇವೆರಡನ್ನೂ ತ್ಯಜಿಸಿದ ಮೇಲೆ ಯಾವುದರಿಂದ ತ್ಯಾಗ ಮಾಡುತ್ತೀಯೊ ಅದನ್ನು (ಅಹಂಕಾರವನ್ನು) ತ್ಯಜಿಸು.'

ತ್ಯಾಗದ ಆದರ್ಶಮೂರ್ತಿ

ಶ್ರೀರಾಮಕೃಷ್ಣರು ತ್ಯಾಗದ ಪರಮಾದರ್ಶ ಮೂರ್ತಿಯಾಗಿದ್ದರು. ಕಾಮಕಾಂಚನ ತ್ಯಾಗ ಅವರ ಜೀವನದ ಉಸಿರಾಗಿತ್ತು. ಅವರ ತ್ಯಾಗ ಎಷ್ಟು ತೀವ್ರವಾಗಿತ್ತೆಂದರೆ, ಅವರ ಇಡೀ ವ್ಯಕ್ತಿತ್ವ ತ್ಯಾಗಭಾವದಿಂದ ಪ್ರತಿಸ್ಪಂದಿಸುತ್ತಿತ್ತು. ದೇಹ ನರಮಂಡಲಗಳು ಕೂಡ ಅವರ ತ್ಯಾಗ ಭಾವಕ್ಕೆ ದನಿಗೂಡಿಸುತ್ತಿದ್ದುವು. ಆಕಸ್ಮಿಕವಾಗಿಯೂ ಅವರಿಗೆ ಹಣವನ್ನು ಮುಟ್ಟಲಾಗುತ್ತಿರಲಿಲ್ಲ. ತಮಗೆ ದೊರೆತ ಪವಾಡ ಶಕ್ತಿಗಳನ್ನೆಲ್ಲ ಹೇಸಿಗೆಯಂತೆ ತ್ಯಜಿಸಿಬಿಟ್ಟರು. ಅವರು ಸರಳತೆಯ, ನಮ್ರತೆಯ ಪ್ರತಿರೂಪದಂತಿದ್ದರು. ಗುರು, ಒಡೆಯ, ತಂದೆ ಎಂದು ಕರೆದರೇನೆ ಅವರಿಗೆ ಸಹಿಸಲಾಗುತ್ತಿರಲಿಲ್ಲ. ಮಾತಿನ ಸಂದರ್ಭದಲ್ಲಿ 'ನಾನು' ಎಂಬ ಶಬ್ದವನ್ನೂ ಉಚ್ಚರಿಸುತ್ತಿರಲಿಲ್ಲ. 'ಇದು' ಎಂದು ತಮ್ಮ ದೇಹದ ಕಡೆ ನಿರ್ದೇಶಿಸುತ್ತಿದ್ದರು. 'ಇದು ನನ್ನ ಮತ', 'ಇದು ನನ್ನ ಅಭಿಪ್ರಾಯ', 'ಇದು ನನ್ನ ಸಿದ್ಧಾಂತ'—ಇತ್ಯಾದಿ ಭಾವನೆಗಳು ಅವರ ವ್ಯಕ್ತಿತ್ವಕ್ಕೇ ವಿರುದ್ಧವಾಗಿದ್ದವು. ತಮ್ಮ ಅಹಂಕಾರವನ್ನು ಅವರು ಜಗನ್ಮಾತೆಯ ಅಡಿದಾವರೆಯಲ್ಲಿ ಅರ್ಪಿಸಿಬಿಟ್ಟಿದ್ದರು. ಆದರೆ ಆ ಜಗನ್ಮಾತೆಯನ್ನೂ ಅದ್ವೈತ ಸಾಧನೆಯ ಸಂದರ್ಭದಲ್ಲಿ ತ್ಯಜಿಸಿಬಿಟ್ಟರು. ಅವರು ಯಾವ ಸಾಧನೆಗೂ ಬದ್ಧರಾಗಿರಲಿಲ್ಲ. ಎಲ್ಲ ಸಾಧನೆಗಳನ್ನೂ ಅನುಸರಿಸಿದರು. ಅವರು ಯಾವ ಮತಕ್ಕೂ ಬದ್ಧರಾಗಿರಲಿಲ್ಲ. ಎಲ್ಲ ಮತಗಳೂ ಅವರಿಗೆ ಸಮಾನವಾಗಿದ್ದವು. ಎಲ್ಲ ದೇವದೇವತೆಗಳೂ ಅವರಿಗೆ ಸಮಾನ. ಸರ್ವಸಂಗ ಪರಿತ್ಯಾಗವೆಂದರೆ ಇದು. ☆

ಶ್ರೀಮಂತ ವರ್ತಕನೊಬ್ಬನ ಪತ್ನಿ ಯುವ ವಯಸ್ಸಿನಲ್ಲಿಯೇ ತೀರಿಕೊಂಡಳು. ತನ್ನ ದುಃಖಶಮನಕ್ಕಾಗಿ ಅವನು ಕೆಲ ಕಾಲ ಸಾಧುಸಂಗ ಮಾಡಲು ಬೇಲೂರು ಮಠಕ್ಕೆ ಬಂದನು. ಆತನ ಮನಸ್ಸಿಗೆ ಸಮಾಧಾನವುಂಟಾಯಿತು. ಸಾಧುಸಂಗದಿಂದ ಅವನ ಮನಸ್ಸು ಅಧ್ಯಾತ್ಮಭಾವದಿಂದ ತುಂಬಿಹೋಯಿತು. ತನ್ನ ಎಲ್ಲ ಆಸ್ತಿಯನ್ನು ರಾಮಕೃಷ್ಣ ಮಿಷನ್ನಿಗೆ ದಾನಮಾಡಲು ನಿರ್ಧರಿಸಿದನು. ಆಗ ರಾಮಕೃಷ್ಣ ಮಹಾಸಂಘದ ಆರ್ಥಿಕ ಪರಿಸ್ಥಿತಿ ತುಂಬ ಶೋಚನೀಯವಾಗಿತ್ತು. ಸ್ವಾಮಿ ಪ್ರೇಮಾನಂದರು ಆಗ ಬೇಲೂರು ಮಠದ ಮ್ಯಾನೇಜರ್. ಅವರು ಆ ವರ್ತಕನ ನಿರ್ಧಾರವನ್ನು ತಿಳಿದು ತುಂಬ ಉತ್ತೇಜಿತರಾದರು ಹಾಗೂ ಬ್ರಹ್ಮಾನಂದರಿಗೆ ಈ ವಿಷಯವನ್ನು ತಿಳಿಸಿದರು.

ಬ್ರಹ್ಮಾನಂದರು ಆ ವರ್ತಕನ ತ್ಯಾಗಭಾವ ಕೇವಲ ತಾತ್ಕಾಲಿಕವಾದುದು ಎಂದು ತಮ್ಮ ದೂರದೃಷ್ಟಿಯಿಂದ ಅರಿತುಕೊಂಡರು. ಅವನ ದಾನವನ್ನು ಸ್ವೀಕರಿಸಿದರೆ ಸಂಘಕ್ಕೆ ತೊಂದರೆ ಉಂಟಾಗುವುದೆಂದು ಅವರಿಗೆ ಅನಿಸಿತು.

ತಮ್ಮ ಮನಸ್ಸಿನಲ್ಲಿರುವುದನ್ನು ಪ್ರೇಮಾನಂದರಿಗೆ ತಿಳಿಸದೆ ಕೈಮುಗಿದುಕೊಂಡು ಬ್ರಹ್ಮಾನಂದರು ಹೇಳಿದರು: "ಭಾಯ್, ಸಾಧುಸಂಗದ ಪರಿಣಾಮವಾಗಿ ಆ ವರ್ತಕನಲ್ಲಿ ವೈರಾಗ್ಯಭಾವ ಉಂಟಾಯಿತು. ಆದರೆ ಅವನ ಸಹವಾಸದಿಂದ ನಾವು ಪ್ರಾಪಂಚಿಕತೆಯಲ್ಲಿ ಮುಳುಗಬೇಕೆ?"

ಅವನ ದಾನವು ಅಸ್ವೀಕೃತವಾಯಿತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

*    *    *    *    *    *

"ಕಾಮಕಾಂಚನ ತ್ಯಾಗವೇ ಈ ಯುಗದಲ್ಲಿ ಶ್ರೀರಾಮಕೃಷ್ಣರ ಸಂದೇಶ. (ಸಂನ್ಯಾಸಿಗಳನ್ನುದ್ದೇಶಿಸಿ) ನೀವು ಸಾಧುಗಳಾಗಲು ಮಠವನ್ನು ಸೇರಿದ್ದೀರಿ. ಸಾಧುವಿನ ಆಭರಣವೇ ಕಾಮಕಾಂಚನ ತ್ಯಾಗ ಮತ್ತು ಭಗವಂತನನ್ನು ಪಡೆಯಲು ಅದೊಂದೇ ಮಾರ್ಗ. ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದಂತೆ ಅನೇಕ ರೀತಿಯ ಪ್ರಲೋಭನೆಗಳು ಎದುರಾಗುತ್ತವೆ. ಕಾಮಕಾಂಚನಾಸಕ್ತಿ, ಹೆಸರು-ಕೀರ್ತಿಗಳ ಆಸೆ ಸಾಧಕನನ್ನು ಭಗವದ್ವಿಮುಖಿಗೊಳಿಸುತ್ತವೆ. ಈ ಪ್ರಲೋಭನೆಗಳೆಂಬ ಕಳ್ಳನ ವಿಷಯದಲ್ಲಿ ನೀವು ಎಚ್ಚರಿಕೆಯಿಂದ ಇರದಿದ್ದರೆ ಅವನು ನಿಮ್ಮಲ್ಲಿರುವ ಎಲ್ಲ ಒಳ್ಳೆಯತನವನ್ನೂ ದೋಚಿಕೊಂಡು ಹೋಗುತ್ತಾನೆ ಮತ್ತು ತಳವಿಲ್ಲದ ಪ್ರಾಪಂಚಿಕತೆಯ ಸಮುದ್ರದಲ್ಲಿ ಮುಳುಗಿಸುತ್ತಾನೆ. ಆದರೆ ಭಗವಂತನ ಅನುಗ್ರಹವೆಂಬ ಇನ್ನೊಂದು ಸಾಗರವಿದೆ. ಪ್ರಾಮಾಣಿಕತೆಯಿಂದ ಒಮ್ಮೆ ಅವನನ್ನು ಕರೆದರೂ ಆ ಸಾಗರದ ಅಮೃತಪಾನ ನಿಮಗೆ ದೊರೆಯುತ್ತದೆ."

—ಸ್ವಾಮಿ ಬ್ರಹ್ಮಾನಂದ